# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1338** |
| ಉತ್ತರಿಸಬೇಕಾದ ದಿನಾಂಕ | : | 09.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಯೋಜನೆಗಳಲ್ಲಿ ಬಡವರಿಗೆ ಮಂಜೂರು ಮಾಡುವ ಮನೆಗಳ ನಿರ್ಮಾಣಕ್ಕೆ ಹಾಲಿ ಇರುವ ಸಹಾಯಧನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ; | ಸರ್ಕಾರವು ಬಡ ವರ್ಗದ ಫಲಾನುಭವಿಗಳು ಮನೆ ನಿರ್ಮಾಣ ಮಾಡಿಕೊಳ್ಳುವಂತೆ ಉತ್ತೇಜಿಸಲು ಸಹಾಯಧನದ ರೂಪದಲ್ಲಿ ಅನುದಾನವನ್ನು ನೀಡುತ್ತಿದೆ. ಇದರ ಜೊತೆಗೆ ಫಲಾನುಭವಿಯು ಸಹಾಯಧನದ ನಾಲ್ಕು ಪಟ್ಟು ಮೀರದಂತೆ ವಂತಿಕೆ ಹಣ ಅಥವಾ ಬ್ಯಾಂಕ್‌ಗಳು/ಸಂಘ ಸಂಸ್ಥೆಗಳ ಮೂಲಕ ಸಾಲವನ್ನು ಪಡೆದು ಮನೆ ನಿರ್ಮಾಣ ಮಾಡಿ ಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>ರಾಜೀವ್ ಗಾಂಧಿ ವಸತಿ ನಿಗಮದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಗಳಡಿ ನೀಡಲಾಗುತ್ತಿರುವ ಸಹಾಯಧನದ ವಿವರ ಕೆಳಕಂಡಂತಿದೆ. |
| ಆ) | ಇಲ್ಲದಿದ್ದಲ್ಲಿ, ಪ್ರಸ್ತುತ ಇರುವ ಕಟ್ಟಡ ಸಾಮಗ್ರಿಗಳ ದರದಲ್ಲಿ ಫಲಾನುಭವಿಗಳು ಮನೆಗಳನ್ನು ನಿರ್ಮಾಣ ಮಾಡಿ ಕೊಳ್ಳಲು ಸಾಧ್ಯವಿದೆಯೇ ; | |
| ಇ) | ಮಾರುಕಟ್ಟೆಯಲ್ಲಿನ ಕಟ್ಟಡ ಸಾಮಗ್ರಿಗಳ ದರವು ಹೆಚ್ಚಾಗಿರುವುದರಿಂದ ಮನೆಗಳ ನಿರ್ಮಾಣ ವೆಚ್ಚದ ಸಹಾಯಧನವನ್ನು ಹೆಚ್ಚಿಸಲು ಸರ್ಕಾರ ಪರಿಶೀಲಿಸಲು ಕ್ರಮ ವಹಿಸುವುದೇ ? | |

| ಕ್ರ. ಸಂ | ಯೋಜನೆ | ಗ್ರಾಮೀಣ | | ನಗರ | |
|---|---|---|---|---|---|
| | | ಸಾಮಾನ್ಯ/ ಅಲ್ಪ ಸಂಖ್ಯಾತ | ಪ.ಜಾತಿ/ ಪ. ಪಂಗಡ | ಸಾಮಾನ್ಯ ಅಲ್ಪ ಸಂಖ್ಯಾತ | ಪ.ಜಾತಿ/ ಪ. ಪಂಗಡ |
| 1. | ಬಸವ ವಸತಿ ಯೋಜನೆ (ಗ್ರಾಮೀಣ) | 1.20 | - | - | - |
| 2. | ವಾಜಪೇಯಿ ನಗರ ವಸತಿ ಯೋಜನೆ(ನ) | - | - | 1.20 | - |
| 3. | ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾ & ನ) | - | 1.75 | - | 2.00 |
| 4. | ಡಿ.ದೇವರಾಜು ಅರಸು ವಸತಿ ಯೋಜನೆ(ಗ್ರಾ & ನ) | 1.20 | 1.50 | 1.20 | 1.50 |
| 5. | ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ) | 1.20 | 1.50 | - | - |

| | | | | | |
|---|---|---|---|---|---|
| 6. | ಪ್ರಧಾನ ಮಂತ್ರಿ ಆವಾಸ್ ಯೋಜನೆ(ನ) | - | - | 1.50 | 1.50 |

ರಾಜ್ಯ ಸರ್ಕಾರದಿಂದ ನೀಡುವ ಸಹಾಯಧನವನ್ನು ಪರಿಷ್ಕರಿಸುವ ಬಗ್ಗೆ ಸಂದರ್ಭಾನುಸಾರ ಪರಿಶೀಲಿಸಲಾಗುವುದು.

ಸಂಖ್ಯೆ :ವಇ 120 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು